# ಪ.ಪಂಗಡಗಳವರ ಪರಿಸ್ಥಿತಿ

ಮಂಗ್ಳೂರ ವಿಜಯ




Article Link: https://aksharasurya.com/2024/02/manglura-vijay.php

ಭಾರತದಲ್ಲಿನ ಪ.ಪಂಗಡಗಳವರ ಪರಿಸ್ಥಿತಿ ಶೋಚನೀಯವಾಗಿದೆ. ಶಿಕ್ಷಣ, ಉದ್ಯೋಗ, ರಾಜಕಾರಣ ಇತ್ಯಾದಿ ಕ್ಷೇತ್ರಗಳ ಬಗೆಗಿನ ಅವರ ಅರಿವು ಪ್ರಾಥಮಿಕ ಮಟ್ಟದಲ್ಲಿದೆ. ಅವರು ಜೀವನಾವಶ್ಯಕತೆಗಳನ್ನು ಪೂರೈಸಿಕೊಳ್ಳುವುದಕ್ಕೇ ತಮ್ಮ ಬದುಕಿನ ಬಹುಭಾಗವನ್ನು ವಿನಿಯೋಗಿಸುವ ಪರಿಸ್ಥಿತಿ ಇದೆ.

ಇನ್ನು ಅವರ ಪರಿಸ್ಥಿತಿ ಕುರಿತು ದೇಶದ ಜನತೆಗೆ ಸಮಗ್ರ ತಿಳುವಳಿಕೆಯೇ ಇಲ್ಲ. ದೇಶದಲ್ಲಿನ ಪ.ಜಾತಿಗಳವರಿಗೆ ತುಲನೆ ಮಾಡಿದಾಗ ದೇಶದ ಪ.ಪಂಗಡಗಳವರ ಮಟ್ಟವು ತೀರಾ ಕೆಳಗೆ ಇದೆ.

ದೇಶದ ಪ.ಪಂಗಡಗಳವರ ಭವಿಷ್ಯವನ್ನು ಉತ್ತಮಪಡಿಸಲು ಪಂಚವಾರ್ಷಿಕ ಯೋಜನೆಗಳಲ್ಲಿ ಮತ್ತು ಪ್ರತಿಯೊಂದು ರಾಜ್ಯವು ಸಿದ್ಧಪಡಿಸುವ ವಾರ್ಷಿಕ ಯೋಜನೆಗಳಲ್ಲಿ ವಿಶೇಷ ಗಮನವನ್ನು ನೀಡಲಾಗಿದೆ ಎಂದು ಸರ್ಕಾರಿ ದಾಖಲೆಗಳು ತಿಳಿಸಿದರೂ ಒಟ್ಟಾರೆ ಪ.ಪಂಗಡಗಳವರ ಪರಿಸ್ಥಿತಿ ಮಾತ್ರ ಇನ್ನೂ ಉತ್ತಮಗೊಂಡಿಲ್ಲ ಎಂಬ ಸತ್ಯವು ಎಲ್ಲರ ಮುಖಕ್ಕೆ ರಾಚುತ್ತಿದೆ.

2011ರ ಜನಗಣತಿ ಪ್ರಕಾರ ದೇಶದ ಜನಸಂಖ್ಯೆಯಲ್ಲಿ 8.6%ರಷ್ಟು (ಅಂ–ದರೆ 10.45 ಕೋಟಿ) ಪ.ಪಂಗಡಗಳವರು ಇದ್ದಾರೆ. ಇವರಲ್ಲಿ 92%ರಷ್ಟು ಜನರು ಹಳ್ಳಿಗಳಲ್ಲಿ, ಹಾಡಿಗಳಲ್ಲಿ, ಅರಣ್ಯದ ಅಂಚುಗಳಲ್ಲಿ ನೆಲೆಸಿದ್ದಾರೆ.

ಸಂವಿಧಾನದಲ್ಲಿ ಪ.ಪಂಗಡಗಳವರಿಗೆ ವಿಶೇಷ ಅವಕಾಶಗಳನ್ನು ಒದಗಿಸಲಾಗಿದೆ. (ಕೋಷ್ಟಕ–1 ನೋಡಿ). ಅವರಿಗಾಗಿ ವಿಶೇಷ ಕಾಯ್ದೆಗಳನ್ನು ಮಾಡಲಾಗಿದೆ. ಅವರು ನೆಲೆಸಿರುವ ಪ್ರದೇಶಗಳಿಗೆ ವಿಶೇಷ ಹಕ್ಕುಗಳನ್ನು ಮತ್ತು ಸೌಲಭ್ಯಗಳನ್ನು ಒದಗಿಸಲಾಗಿದೆ. ಅವರ ಸಬಲೀಕರಣಕ್ಕಾಗಿ ವಿಶೇಷ ಯೋಜನೆ/ಕಾರ್ಯಕ್ರಮಗಳನ್ನು ರೂಪಿಸಿ, ಜಾರಿ ಮಾಡಿಕೊಂಡು ಬರಲಾಗಿದೆ.

ಸಂವಿಧಾನ ಬರೆದ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಸಂವಿಧಾನವನ್ನು ಪರಾಮರ್ಶಿಸಿ ಒಪ್ಪಿಕೊಂಡ ಸಂವಿಧಾನ ರಚನಾ ಸಭೆ ಸದಸ್ಯರು ದೇಶದ

ಪ.ಪಂಗಡಗಳವರ ವಿಶೇಷ ಅಗತ್ಯಗಳನ್ನು ಸ್ಪಷ್ಟವಾಗಿ ತಿಳಿದವರಾಗಿದ್ದರು. ದೇಶದ ಪ.ಪಂಗಡಗಳವರಿಗೆ ನಿಖರವಾಗಿ ರಾಜಕೀಯ ಹಕ್ಕು ಒದಗಿಸಿದ ಅವರು, ಪ.ಪಂಗಡಗಳವರಿಗೆ ಸಾಮಾಜಿಕ ಮತ್ತು ಆರ್ಥಿಕ ನ್ಯಾಯವನ್ನೂ ಒದಗಿಸಿ. ಅವರು ಯಾವುದೇ ರೀತಿಯ ಶೋಷಣೆಗೆ ಸಿಲುಕದ ರೀತಿಯಲ್ಲಿ ವಿವಿಧ ನಿರ್ಬಂಧಗಳನ್ನು ಇತರರ ಮೇಲೆ ಹೇರಿದರು.

ಎಲ್ಲರಿಗೂ ಇರುವ ಮೂಲಭೂತ ಹಕ್ಕುಗಳು ದೇಶದ ಪ.ಪಂಗಡಗಳರಿಗೂ ಖಾತ್ರಿಯಾಗಿವೆ. ರಾಜ್ಯ ನೀತಿ ನಿರ್ದೇಶಕ ತತ್ವಗಳು ಎಂಬ ಭಾಗದಲ್ಲಿ ಸಂವಿಧಾನವು ಪ್ರತಿಯೊಂದು ಸರ್ಕಾರವು ಪ.ಪಂಗಡಗಳವರಿಗಾಗಿ ವಿಶೇಷ ಅವಕಾಶಗಳನ್ನು ಖಾತ್ರಿಪಡಿಸಬೇಕು ಎಂದು ತಾಕೀತು ಮಾಡಿದೆ.

**ಅಭಿವೃದ್ಧಿ ಯೋಜನೆಗಳು ಮತ್ತು ಕಾರ್ಯಕ್ರಮಗಳು:**

1951–56ರಲ್ಲಿ ಪ್ರಾರಂಭವಾದ ಮೊದಲನೇ ಪಂಚ ವಾರ್ಷಿಕ ಯೋಜನೆ ಕಾಲದಿಂದಲೂ ಪ.ಪಂಗಡಗಳವರ ವಿಶೇಷ ಅವಶ್ಯಕತೆಗಳ ಕಡೆಗೆ ಖಚಿತ ಗಮನವನ್ನು ನೀಡುತ್ತಾ ಬರಲಾಯಿತು. ಪ.ಪಂಗಡಗಳವರು ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಪ್ರಗತಿ ಸಾಧಿಸಲು ಸಹಕಾರಿಯಾಗುವ ಯೋಜನೆ/ಕಾರ್ಯಕ್ರಮಗಳನ್ನು ರೂಪಿಸುವ ಕಡೆಗೆ ಗಮನ ನೀಡಲಾಯಿತು. ವಿವಿಧ ಅಭಿವೃದ್ಧಿ ಸೂಚ್ಯಂಕಗಳನ್ನು ಗುರುತಿಸಿಕೊಂಡು, ಪ.ಪಂಗಡಗಳವರ ಸರ್ವಾಂಗೀಣ ಅಭಿವೃದ್ಧಿ ಸಾಧ್ಯವಾಗಿಸುವುದರ ಕಡೆಗೆ ಹೆಚ್ಚಿನ ಕಾಳಜಿಯನ್ನು ತೋರಲಾಯಿತು. ಆದಾಗ್ಯೂ, ಮೊದಲ ಐದು ವರ್ಷಗಳಲ್ಲಿ ಸರ್ಕಾರಗಳು ಹತ್ತು ಹಲವು ಪಾಠಗಳನ್ನು ಕಲಿತವು. ಪ.ಪಂಗಡಗಳವರ ಸಮಗ್ರ ಪ್ರಗತಿಗಾಗಿ ಇನ್ನೂ ನಿಖರ ಯೋಜನೆ/ಕಾರ್ಯಕ್ರಮಗಳನ್ನು ರೂಪಿಸಿ, ಜಾರಿ ಮಾಡುವ ಅವಶ್ಯಕತೆ ಇದೆ ಎಂಬುದನ್ನು ಮನವರಿಕೆ ಮಾಡಿಕೊಂಡವು.

ಈ ಹಿನ್ನೆಲೆಯಲ್ಲಿ, ಎರಡನೇ ಪಂಚ ವಾರ್ಷಿಕ ಯೋಜನೆ (1956–1961) ಹೊತ್ತಿಗೆ (ಎ) ಸಂಪರ್ಕ ಮಾಧ್ಯಮ (ಬಿ) ಶಿಕ್ಷಣ ಮತ್ತು ಸಂಸ್ಕೃತಿ (ಸಿ) ಆದಿವಾಸಿ ಆರ್ಥಿಕತೆಯ ಅಭಿವೃದ್ಧಿ (ಡಿ) ಕುಡಿಯುವ ನೀರು, ವಸತಿ ಮತ್ತು ಆರೋಗ್ಯ ಈ ನಾಲ್ಕು ಕ್ಷೇತ್ರಗಳಲ್ಲಿ ಪ.ಪಂಗಡಗಳವರ ನಿಶ್ಚಿತ ಪ್ರಗತಿಯನ್ನು ಸಾಧಿಸುವ ಕಡೆ ತೀವ್ರ ಗಮನ ಕೊಡಲಾಯಿತು. ಅಲ್ಲದೆ, ಪ.ಪಂಗಡಗಳವರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ವಿಶೇಷ ಯೋಜನೆ/ಕಾರ್ಯಕ್ರಮಗಳನ್ನು ರೂಪಿಸಲಾಯಿತು.

1951–56ರ ಪ್ರಥಮ ಪಂಚ ವಾರ್ಷಿಕ ಯೋಜನೆ ಕಾಲದಲ್ಲಿ ಜಾರಿ

ಮಾಡಲಾದ ಕಾರ್ಯಕ್ರಮ/ಯೋಜನೆಗಳ ಫಲಿತಾಂಶವು 1961–66ನೇ ಮೂರನೇ ಪಂಚ ವಾರ್ಷಿಕ ಯೋಜನೆ ಪ್ರಾರಂಭವಾಗುವ ಕಾಲಕ್ಕೆ ಸ್ಪಷ್ಟವಾಗಿ ಗೋಚರವಾದವು. ಆ ಹೊತ್ತಿಗೆ ದೇಶದಲ್ಲಿ ಪ.ಪಂಗಡಗಳವರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದ 43 ಬ್ಲಾಕ್‌ಗಳನ್ನು ಗುರುತಿಸಿ, ಇವುಗಳಿಗೆ 'ಟ್ರೈಬಲ್ ಡೆವಲಪ್‌ಮೆಂಟ್ ಬ್ಲಾಕ್ಸ್' ಎಂದು ಹೆಸರಿಸಿ, ಅಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಜಾರಿ ಮಾಡಲಾಗಿತ್ತು.

ನಾಲ್ಕನೇ ಪಂಚ ವಾರ್ಷಿಕ ಯೋಜನೆಯ ಅವಧಿ 1969–74 ಆಗಿತ್ತು. ಈ ಕಾಲಕ್ಕೆ ದೇಶದ ಪ.ಪಂಗಡಗಳವರ ಬದುಕಿನಲ್ಲಿ ಗಮನಾರ್ಹ ಬದಲಾವಣೆ ಜರುಗಿದ್ದುದು ಎದ್ದು ಕಾಣುತ್ತಿತ್ತು. ಈ ಅವಧಿಯಲ್ಲಿ ಆಂಧ್ರಪ್ರದೇಶ, ಬಿಹಾರ, ಮಧ್ಯಪ್ರದೇಶ ಮತ್ತು ಒರಿಸ್ಸಾ ರಾಜ್ಯಗಳಲ್ಲಿ ಒಂದೊಂದು ಪೈಲಟ್ ಪ್ರಾಜೆಕ್ಟ್‌ಗಳನ್ನು ಪ್ರಾರಂಭಿಸಲಾಯಿತು.

ಪ.ಪಂಗಡಗಳವರ ಬದುಕಿನಲ್ಲಿ ಮಹತ್ವದ ಪ್ರಗತಿಯನ್ನು ಸಾಧಿಸುವ ಅವಕಾಶವನ್ನು ಕಲ್ಪಿಸಲಾಗಿದ್ದು ಐದನೇ ಪಂಚ ವಾರ್ಷಿಕ ಯೋಜನೆ (1974–78)ರ ಅವಧಿಯಲ್ಲಿ. ಅದು 'ಟ್ರೈಬಲ್ ಸಬ್ ಪ್ಲಾನ್' (ಪ.ಪಂಗಡಗಳ ಉಪ ಯೋಜನೆ) ಎಂದು ಖ್ಯಾತಿಯಾಗಿದೆ. 'ಪ್ರತಿ ರಾಜ್ಯದ ಆಯವ್ಯಯದಲ್ಲಿ ನಿರ್ದಿಷ್ಟ ಪ್ರಮಾಣದ ಭಾಗವನ್ನು ಪ.ಪಂಗಡಗಳವರ ಸರ್ವಾಂಗೀಣ ಅಭಿವೃದ್ಧಿಗಾಗಿ ಕಡ್ಡಾಯವಾಗಿ ವೆಚ್ಚಮಾಡತಕ್ಕದ್ದು' ಎಂಬ ಭರವಸೆಯನ್ನು ಈ ಯೋಜನೆ ಮೂಲಕ ನೀಡಲಾಯಿತು. ಇದಕ್ಕೆ ಕಾನೂನಿನ ಮತ್ತು ಆಡಳಿತಾತ್ಮಕ ಸಮ್ಮತಿಯನ್ನು ಒದಗಿಸಲಾಯಿತು.

ಆರನೇ ಪಂಚ ವಾರ್ಷಿಕ ಯೋಜನೆ ಅವಧಿಯಲ್ಲಿ (1980–85) 'ಪ.ಪಂಗಡಗಳವರು ಹೆಚ್ಚಿನ ಸಂಖ್ಯೆಯಲ್ಲಿ ಇರುವ ಪ್ರದೇಶಗಳಲ್ಲಿ ಕನಿಷ್ಟ 50%ರಷ್ಟು ಕುಟುಂಬಗಳನ್ನು ಬಡತನ ರೇಖೆಯಿಂದ ಮೇಲಕ್ಕೆ ತರುವ' ನಿಟ್ಟಿನಲ್ಲಿ ಖಚಿತ ಕ್ರಮಗಳನ್ನು ಕೈಗೊಳ್ಳುವ ಧ್ಯೇಯವನ್ನು ಇಟ್ಟುಕೊಳ್ಳಲಾಯಿತು.

ಏಳನೇ ಪಂಚ ವಾರ್ಷಿಕ ಯೋಜನೆ ಅವಧಿಯಲ್ಲಿ (1985–90), ಪ.ಪಂಗಡಗಳವರ ಆರ್ಥಿಕ ಸಬಲೀಕರಣಕ್ಕಾಗಿ ರಾಷ್ಟ್ರ ಮಟ್ಟದಲ್ಲಿ ಎರಡು ಸಂಸ್ಥೆಗಳನ್ನು (ಟ್ರೈಬಲ್ ಕೋಆಪರೇಟಿವ್ ಮಾರ್ಕೆಟಿಂಗ್ ಡೆವಲಪ್‌ಮೆಂಟ್ ಫೆಡರೇಷನ್ ಮತ್ತು ನ್ಯಾಷನಲ್ ಷಡ್ಯೂಲ್ಡ್ ಟ್ರೈಬ್ಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್) ಅಸ್ತಿತ್ವಕ್ಕೆ ತರಲಾಯಿತು. ಮೊದಲನೆಯದು ಟ್ರೈಬಲ್ ಡೆವಲಪ್‌ಮೆಂಟ್ ಕೋಅಪರೇಟಿವ್ ಕಾರ್ಪೊರೇಷನ್ಸ್ ಮಾರ್ಗದರ್ಶಿ ಹಾಗೂ ಮೇಲ್ವಿಚಾರಣಾ ಸಂಸ್ಥೆಯಾಗಿ, ಪ.ಪಂಗಡಗಳವರು ಬೆಳೆದ ಅರಣ್ಯ ಉತ್ಪನ್ನಗಳಿಗೆ

ಮತ್ತು ಕೃಷಿ ಉತ್ಪನ್ನಗಳಿಗೆ ನ್ಯಾಯವಾದ ಬೆಲೆ ದೊರಕುವುದನ್ನು ಖಾತ್ರಿಪಡಿಸಿತು. ಎರಡನೆಯದು ಪ.ಪಂಗಡಗಳವರ ಆರ್ಥಿಕ ಅಭಿವೃದ್ಧಿ ಕಡೆಗೆ ವಿಶೇಷ ಗಮನ ನೀಡುವ ಸಂಸ್ಥೆಯಾಗಿ, ಪ.ಪಂಗಡಗಳವರು ವ್ಯಾಪಾರ, ಕೈಗಾರಿಕೆಗಳಲ್ಲಿ ಭಾಗವಹಿಸುವುದನ್ನು ಖಾತ್ರಿಪಡಿಸಿತು.

ಎಂಟನೇ ಪಂಚವಾರ್ಷಿಕ ಯೋಜನೆ (1992–97) ಅವಧಿಯಲ್ಲಿ ಪ.ಪಂಗಡಗಳವರು ವಿವಿಧ ಕ್ಷೇತ್ರಗಳಲ್ಲಿ ಶೋಷಣೆಗೆ ಗುರಿಯಾಗುತ್ತಿರುವುದನ್ನು ಗುರುತಿಸುವ ಮತ್ತು ಅವರನ್ನು ಶೋಷಣೆಯಿಂದ ವಿಮೋಚನೆ ಮಾಡಲು ಅಗತ್ಯ ಪರಿಹಾರ ಕ್ರಮಗಳನ್ನು ಒದಗಿಸುವುದು ಸಾಧ್ಯವಾಯಿತು. ಅವರು ಸಾಂವಿಧಾನಿಕ ಮೂಲಭೂತ ಹಕ್ಕುಗಳನ್ನು ಪಡೆದುಕೊಳ್ಳುವಂತಾಗುವ ನಿಟ್ಟಿನಲ್ಲಿ ಜಾಗೃತಿ ಮೂಡಿಸಲಾಯಿತು.

ಒಂಬತ್ತನೇ ಪಂಚವಾರ್ಷಿಕ ಯೋಜನೆ (1997–2002) ಅವಧಿಯಲ್ಲಿ ಪ.ಪಂಗಡಗಳವರಿಗೆ ಗೌರವದಿಂದ ಬದುಕುವ ಹಕ್ಕು ದೊರಕುವಂತಾಗುವುದಕ್ಕೆ ಆದ್ಯತೆಯನ್ನು ನೀಡಲಾಯಿತು. ಹತ್ತನೇ ಪಂಚವಾರ್ಷಿಕ ಯೋಜನೆ (2002–07) ಪ.ಪಂಗಡಗಳವರು ದೇಶದ ಇತರ ನಾಗರಿಕರ ಮಟ್ಟಕ್ಕೆ ಬರುವಲ್ಲಿ ಇರುವ ಅಡ್ಡಿಗಳನ್ನು ಗುರುತಿಸಿ, ಅವುಗಳ ನಿವಾರಣೆಗೆ ಅಗತ್ಯ ಅವಕಾಶಗಳನ್ನು ಒದಗಿಸುವುದಕ್ಕೆ ತೀವ್ರ ಕ್ರಮಗಳನ್ನು ಕೈಗೊಳ್ಳಲಾಯಿತು.

ಹನ್ನೊಂದನೇ (2007–12) ಮತ್ತು ಹನ್ನೆರಡನೇ (2012–17) ಪಂಚವಾರ್ಷಿಕ ಯೋಜನೆ ಅವಧಿಗಳಲ್ಲಿ ಪ.ಪಂಗಡಗಳವರು ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸುವ ಕಡೆಗೆ ಗಮನ ಕೇಂದ್ರೀಕರಿಸಲಾಯಿತು.

**ನೀತಿ ಆಯೋಗ:**

2017ರ ನಂತರ ವಿವಿಧ ರಾಜ್ಯಗಳಲ್ಲಿನ ಪ.ಪಂಗಡಗಳವರ ಅಭಿವೃದ್ಧಿ ಕುರಿತು 'ನೀತಿ ಆಯೋಗ'ವು ನಕ್ಷೆಗಳನ್ನು ರೂಪಿಸತೊಡಗಿತು. ಟ್ರೈಬಲ್ ಸಬ್ ಪ್ಲಾನ್ (ಪ.ಪಂಗಡ ಉಪ ಯೋಜನೆ) ಕುರಿತಂತೆ ಇದು ರಾಜ್ಯಗಳಲ್ಲಿ ಕಾಲಕಾಲಕ್ಕೆ ಸೂಚನೆ/ನಿರ್ದೇಶನಗಳನ್ನು ನೀಡುವ ಮೂಲಕ ಪ.ಪಂಗಡಗಳವರ ಹಿತ ರಕ್ಷಿಸುವ ಕಾರ್ಯದಲ್ಲಿ ನಿರತವಾಗಿದೆ.

**ಜೀವನ ಮಟ್ಟದ ಅಭಿವೃದ್ಧಿ:**

2017ರವರೆಗೆ ಕಾರ್ಯ ನಿರ್ವಹಿಸಿದ ಯೋಜನಾ ಆಯೋಗವು ತೆಂಡುಲ್ಕರ್ ಸಮಿತಿ ಸೂಚಿಸಿದ ಪದ್ಧತಿ ಆಧರಿಸಿ, ಪ.ಪಂಗಡಗಳವರಲ್ಲಿ ಬಡತನ

ಪ್ರಮಾಣ ಎಷ್ಟಿದೆ ಎಂಬುದನ್ನು ಗುರುತಿಸುತ್ತಿತ್ತು. ಅದು ನ್ಯಾಷನಲ್ ಸ್ಯಾಂಪಲ್ ಸರ್ವೆ ಆಫೀಸ್ ಒದಗಿಸುವ ಅಂಕಿ–ಅಂಶಗಳನ್ನು ಆಧಾರವಾಗಿ ಪರಿಗಣಿಸುತ್ತಿತ್ತು. ಅದರಂತೆ ಪ.ಪಂಗಡಗಳವರಲ್ಲಿ ಬಡತನ ಪ್ರಮಾಣವು ಗ್ರಾಮೀಣ ಭಾಗದಲ್ಲಿ 45.3% ಮತ್ತು ನಗರ/ಪಟ್ಟಣ ಭಾಗದಲ್ಲಿ 24.1%ರಷ್ಟಿತ್ತು. ಕರ್ನಾಟಕದಲ್ಲಿ 2009–10 ರಿಂದ 2011–12ರ ಅವಧಿಯಲ್ಲಿ ಪ.ಪಂಗಡಗಳವರು ಗ್ರಾಮೀಣ ಪ್ರದೇಶಗಳಲ್ಲಿನ ಪ.ಪಂಗಡಗಳವರಲ್ಲಿ ಬಡತನ ಪ್ರಮಾಣವು 21.3% ರಿಂದ 30.8ಕ್ಕೆ ಏರಿರುವುದು ದಾಖಲಾಗಿದ್ದರೆ, ಇದೇ ಅವಧಿಯಲ್ಲಿ ನಗರ/ಪಟ್ಟಣ ಪ್ರದೇಶಗಳಲ್ಲಿನ ಪ.ಪಂಗಡಗಳವರಲ್ಲಿ ಬಡತನ ಪ್ರಮಾಣವು 35.6% ರಿಂದ 33.7%ಕ್ಕೆ ಇಳಿಕೆ ಆಗಿರುವುದು ತಿಳಿಯುತ್ತದೆ.[1]

**ಸಾಕ್ಷರತೆ:**

2011ರ ಜನಗಣತಿ ವಿವರಗಳು ತಿಳಿಸುವಂತೆ. ನಗರ/ಪಟ್ಟಣವಾಸಿ ಪ.ಪಂಗಡಗಳವರಲ್ಲಿ ಸಾಕ್ಷರತೆ ಪ್ರಮಾಣವು ಪುರುಷರಲ್ಲಿ 73%ರಷ್ಟು ಮತ್ತು ಮಹಿಳೆಯರಲ್ಲಿ 59%ರಷ್ಟು ಇದೆ. ಪ್ರಾಥಮಿಕ ಹಂತದಲ್ಲಿ ಪ್ರವೇಶ ಪಡೆಯುವ ಪ್ರಮಾಣವು ಕಡಿಮೆ ಇರುವುದು ಮತ್ತು ಈ ಹಂತದಿಂದಲೇ ಶಾಲೆ ಬಿಡುವ ಮಕ್ಕಳ ಸಂಖ್ಯೆ ಏರಿಕೆಯಾಗುತ್ತಾ ಹೋಗುತ್ತಿರುವುದು ಕಂಡುಬರುತ್ತದೆ.[2]

ಪ.ಪಂಗಡಗಳ ಮಕ್ಕಳಿಗೆ ಉಚಿತ ಪಠ್ಯ ಪುಸ್ತಕ/ಯೂನಿಫಾರ್ಮ್/ಉಚಿತ ಶಿಕ್ಷಣ ನೀಡಲು ಪ್ರಾರಂಭಿಸಿದ ನಂತರ ಶಾಲಾ ಪ್ರವೇಶ ಪ್ರಮಾಣದಲ್ಲಿ ತುಸು ಏರಿಕೆ ಕಂಡಿದ್ದು ಶಾಲೆ ಬಿಡುವ ಪ್ರಮಾಣದಲ್ಲಿ ಇಳಿಕೆ ಕಂಡು ಬಂದಿದೆ. ಡಿಸ್ಟ್ರಿಕ್ಟ್ ಪ್ರೈಮರಿ ಎಜುಕೇಷನ್ ಪ್ರೋಗ್ರಾಂ, ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ, ಮಧ್ಯಾಹ್ನದ ಊಟ ಪೂರೈಕೆ, ನವೋದಯ ವಿದ್ಯಾಲಯ, ಹಾಸ್ಟೆಲ್ ಸೌಲಭ್ಯ ಪೂರೈಕೆ ಮುಂತಾದ ಕ್ರಮಗಳು ಪರಿಣಾಮ ಬೀರಿರುವುದು ಸ್ಪಷ್ಟವಾಗಿ ಕಾಣುತ್ತದೆ.

ಪ.ಪಂಗಡಗಳ ಬಾಲಕಿಯರಿಗೆ ಹಾಸ್ಟೆಲ್ ಸೌಲಭ್ಯ ಒದಗಿಸುವುದನ್ನು ಮೂರನೇ ಪಂಚವಾರ್ಷಿಕ ಯೋಜನೆ (1961–66) ಕಾಲದಿಂದಲೇ ಪ್ರಾರಂಭಿಸಲಾದರೂ, ಇದು ಪ್ರತಿ ವರ್ಷದ ನಿರ್ದಿಷ್ಟ ಕಾರ್ಯಕ್ರಮವಾಗಿ ಜಾರಿ ಆಗತೊಡಗಿದ್ದು ಮಾತ್ರ 1989–90ರಿಂದ! ಪ.ಪಂಗಡಗಳವರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿರುವ ಪ್ರದೇಶಗಳಲ್ಲಿ ಎಲ್ಲಾ ಬಾಲಕಿಯರಿಗೆ ಶಾಲಾ ಸೌಲಭ್ಯವನ್ನು ಒದಗಿಸುವ ಕಾರ್ಯಕ್ಕೆ ಚುರುಕು ಬಂದಿದ್ದು 1990–91ರ ಬಳಿಕ! ಸಂವಿಧಾನದ ಅನುಚ್ಛೇದ 275(1)ರ ಪ್ರಕಾರ, ನಿರ್ದಿಷ್ಟ ಅನುದಾನ ಬಳಸಿ, ಮಕ್ಕಳಿಗೆ 6ನೇ ತರಗತಿಯಿಂದ 12ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಲು ಅವಕಾಶ ಒದಗಿಸುವ

280 'ಏಕಲವ್ಯ ಮಾದರಿ ವಸತಿ ಶಾಲೆ'ಗಳನ್ನು 20 ರಾಜ್ಯಗಳಲ್ಲಿ ಪ್ರಾರಂಭಿಸಲು ಉದ್ದೇಶಿಸಿದ್ದು 1997–98ರಿಂದ![3]

ಪ.ಪಂಗಡಗಳ ಮಕ್ಕಳು ಕೂಡ ಉನ್ನತ ಶಿಕ್ಷಣ ಕ್ಷೇತ್ರವನ್ನು ಪ್ರವೇಶಿಸಲು ಸಾಧ್ಯವಾಗುತ್ತದೆ ಎಂಬ ದೂರದೃಷ್ಟಿಯಿಂದ 280 ಶಾಲೆಗಳನ್ನು ಪ್ರಾರಂಭಿಸಲು ಉದ್ದೇಶಿಸಿದ್ದರೂ, 2019ರವರೆಗೆ ವಾಸ್ತವದಲ್ಲಿ ಪ್ರಾರಂಭಿಸಲಾಗಿರುವುದು ಕೇವಲ 200 ಶಾಲೆಗಳನ್ನು.

ದೇಶದಲ್ಲಿ 2017ರವರೆಗೆ ಇದ್ದ 'ಏಕಲವ್ಯ ಮಾದರಿ ವಸತಿ ಶಾಲೆ'ಗಳು ಕೇವಲ 173 ಮಾತ್ರ ಕಾರ್ಯ ನಿರ್ವಹಿಸುತ್ತಿದ್ದವು. ಕಳೆದ ಐದು ವರ್ಷಗಳಲ್ಲಿ ಹೊಸದಾಗಿ ಪ್ರಾರಂಭವಾಗಿರುವ 'ಏಕಲವ್ಯ ಮಾದರಿ ವಸತಿ ಶಾಲೆ'ಗಳ ಸಂಖ್ಯೆ 205. 2020ರಲ್ಲೇ ಕೇಂದ್ರ ಸರ್ಕಾರ ಈ ವಿಷಯದಲ್ಲಿ ಹೊಂದಿರುವ ಗುರಿ 740. ಅಂದರೆ, ಮೂರು ವರ್ಷಗಳ ಹಿಂದೆ ಗುರುತಿಸಿಕೊಂಡಿದ್ದ ಗುರಿ ತಲುಪಲು ಸರ್ಕಾರ ಇನ್ನೂ 362 'ಏಕಲವ್ಯ ಮಾದರಿ ವಸತಿ ಶಾಲೆ'ಗಳನ್ನು ಪ್ರಾರಂಭಿಸಬೇಕಿದೆ.

**ಇತರೆ:**

ಭೂಮಿ ಹಂಚಿಕೆ, ಅರಣ್ಯದ ಅಂಚಿನಲ್ಲಿ ಜೀವಿಸುವ ಪ.ಪಂಗಡಗಳವರಿಗೆ ವಸತಿ ಪೂರೈಕೆ, ಪೌಷ್ಟಿಕ ಆಹಾರ ವಿತರಣೆ, ಉದ್ಯೋಗ ಕೌಶಲ್ಯ ಕಲಿಸುವಿಕೆ, ಉನ್ನತ ಶಿಕ್ಷಣದಲ್ಲಿ ಅವಕಾಶ ಮುಂತಾಗಿ ಹತ್ತು ಹಲವು ಸೌಲಭ್ಯಗಳನ್ನು ದೇಶದ ಪ.ಪಂಗಡಗಳವರಿಗೆ ಇನ್ನೂ ಒದಗಿಸಬೇಕಿದೆ. ಕ್ರಮಿಸುವ ದಾರಿ ದೂರ ಇದೆ. ಸಾಧಿಸಿರುವುದು ಅತಿ ಕಡಿಮೆ. ಹಾಗಾದರೆ, ಸಂವಿಧಾನದ ಆಶಯದಂತೆ ದೇಶದ ಪ.ಪಂಗಡಗಳವರೂ ಇತರ ನಾಗರಿಕರ ಮಟ್ಟಕ್ಕೆ ಬರುವುದಕ್ಕೆ ದಶಕಗಳೇ ಬೇಕಾಗುತ್ತವೆಯೇನೊ!

**ಅಡಿ ಟಿಪ್ಪಣಿಗಳು:**

1. ಭಾರತ ಸರ್ಕಾರದ ಪ.ಪಂಗಡಗಳ ಸಚಿವಾಲಯ 2021–22ನೇ ವರ್ಷದಲ್ಲಿ ಪ್ರಕಟಿಸಿದ ವಾರ್ಷಿಕ ವರದಿ.
2. ಭಾರತ ಸರ್ಕಾರದ ಪ.ಪಂಗಡಗಳ ಸಚಿವಾಲಯ 2021–22ನೇ ವರ್ಷದಲ್ಲಿ ಪ್ರಕಟಿಸಿದ ವಾರ್ಷಿಕ ವರದಿಯಲ್ಲಿ ಉಲ್ಲೇಖಿಸಿರುವ ಭಾರತದ ರಿಜಿಸ್ಟ್ರಾರ್ ಜನರಲ್ ಅವರ ವರದಿ.
3. ಭಾರತ ಸರ್ಕಾರದ ಪ.ಪಂಗಡಗಳ ಸಚಿವಾಲಯ 2021–22ನೇ ವರ್ಷದಲ್ಲಿ ಪ್ರಕಟಿಸಿದ ವಾರ್ಷಿಕ ವರದಿಯಲ್ಲಿ ಉಲ್ಲೇಖಿಸಿರುವ ಯೂನಿಫೈಡ್ ಡಿಸ್ಟ್ರಿಕ್ಟ್ ಇನ್‌ಫಾರೇಷನ್ ಸಿಸ್ಟಮ್ ಫಾರ್ ಎಜುಕೇಷನ್ ಪ್ಲಸ್ ವರದಿ.

## ಕೋಷ್ಟಕ–1

**ಪ.ಪಂಗಡಗಳವರಿಗಾಗಿ ಸಂವಿಧಾನದಲ್ಲಿ ಒದಗಿಸಲಾಗಿರುವ ವಿಶೇಷ ಅವಕಾಶಗಳು**

**ಅನುಚ್ಛೇದ–164(1):**

ಗಮನಾರ್ಹ ಪ್ರಮಾಣದಲ್ಲಿ ಪ.ಪಂಗಡಗಳವರು ಇರುವ ರಾಜ್ಯಗಳಲ್ಲಿ ಇವರ ಅಭಿವೃದ್ಧಿಗಾಗಿ ಪ್ರತ್ಯೇಕ ಸಚಿವಾಲಯ ಸ್ಥಾಪಿಸುವುದು.

**ಅನುಚ್ಛೇದ–275(1):**

ಗುರುತಿಸಲ್ಪಟ್ಟ ಪ್ರದೇಶಗಳಲ್ಲಿನ ಪ.ಪಂಗಡಗಳವರ ಅಭಿವೃದ್ಧಿಗಾಗಿ ಮತ್ತು ಅಲ್ಲಿನ ಆಡಳಿತ ನಿರ್ವಹಣೆಗಾಗಿ ವಿಶೇಷ ಸಹಾಯಾನುದಾನ ನಿಗದಿಪಡಿಸುವುದು; ರಾಜ್ಯಗಳಲ್ಲಿನ ಪ.ಪಂಗಡಗಳವರ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದಿಂದ ಅನುದಾನ ಒದಗಿಸುವುದು.

**ಅನುಚ್ಛೇದ–330, 332 ಮತ್ತು 335:**

ಪ.ಪಂಗಡಗಳವರಿಗಾಗಿ ಲೋಕಸಭೆಯಲ್ಲಿ ಮತ್ತು ರಾಜ್ಯಗಳ ವಿಧಾನ ಸಭೆಗಳಲ್ಲಿ ಮೀಸಲು ಕ್ಷೇತ್ರಗಳನ್ನು ಗುರುತಿಸುವುದು ಹಾಗೂ ಸರ್ಕಾರಿ ಹುದ್ದೆಗಳಲ್ಲಿ ಮೀಸಲಾತಿ ಒದಗಿಸುವುದು.

**ಅನುಚ್ಛೇದ–340:**

ಪ.ಪಂಗಡಗಳವರ ಸರ್ವಾಂಗೀಣ ಅಭಿವೃದ್ಧಿ ಕುರಿತು ನಿಗಾ ಇಡಲು ಪ.ಪಂಗಡಗಳ 'ರಾಷ್ಟ್ರೀಯ ಆಯೋಗ'ವನ್ನು ರಚಿಸುವುದು

**ಅನುಚ್ಛೇದ–342:**

ದೇಶದಲ್ಲಿನ ಪಂಗಡಗಳನ್ನು ಪ.ಪಂಗಡಗಳ ಪಟ್ಟಿಯಲ್ಲಿ ಸೇರ್ಪಡೆ ಮಾಡುವುದು

**ಐದನೇ ಷಡ್ಯೂಲ್:**

ಗುರುತಿಸಲ್ಪಟ್ಟ ಪ್ರದೇಶಗಳಲ್ಲಿನ ಪ.ಪಂಗಡಗಳವರ ಅಭಿವೃದ್ಧಿಗಾಗಿ ವಿಶೇಷ ಕ್ರಮಗಳನ್ನು ಸಲಹೆ ಮಾಡಲು, 'ಟ್ರೈಬಲ್ ಅಡ್ವೈಜರಿ ಕೌನ್ಸಿಲ್'ಗಳನ್ನು

ರಚಿಸುವುದು. ಅನುಚ್ಛೇದ–244(1).

**ಆರನೇ ಷಡ್ಯೂಲ್:**

ಅಸ್ಸಾಂ, ಮೇಘಾಲಯ, ತ್ರಿಪುರಾ ಮತ್ತು ಮಿಜೋರಾಮ್ ರಾಜ್ಯಗಳಲ್ಲಿ ಗುರುತಿಸಲ್ಪಟ್ಟ ಪ್ರದೇಶಗಳಲ್ಲಿನ ಪ.ಪಂಗಡಗಳವರು ಆಡಳಿತದಲ್ಲಿ ಸಕ್ರಿಯವಾಗಿ ಭಾಗವಹಿಸುವುದಕ್ಕೆ ಅವಕಾಶ ನೀಡುವಂಥ 'ಸ್ವಾಯತ್ತ ಜಿಲ್ಲೆ' ಮತ್ತು 'ಸ್ವಾಯತ್ತ ಪ್ರದೇಶ'ಗಳನ್ನು ರಚಿಸುವುದು. ಅನುಚ್ಛೇದ 244(2).

**ಸಂವಿಧಾನ ತಿದ್ದುಪಡಿ:**

ಪ.ಪಂಗಡಗಳು ತಮ್ಮ ಅಭಿವೃದ್ಧಿ ಪಥವನ್ನು ತಳಮಟ್ಟದಲ್ಲಿ ತಾವೇ ಗುರುತಿಸಿಕೊಳ್ಳುವುದಕ್ಕೆ ಅವಕಾಶ ಒದಗಿಸುವ ನಿಟ್ಟಿನಲ್ಲಿ ಸಂವಿಧಾನಕ್ಕೆ ತರಲಾದ 73ನೇ ಮತ್ತು 74ನೇ ತಿದ್ದುಪಡಿಗಳು.

**ಪೆಸಾ ಕಾಯ್ದೆ 1996:**

ಪ.ಪಂಗಡಗಳವರು ತಮ್ಮ ಪ್ರದೇಶದಲ್ಲಿ ಸ್ವಾಯತ್ತ ಆಡಳಿತವನ್ನು ನಡೆಸುವುದಕ್ಕೆ ಅವಕಾಶ ಒದಗಿಸಲು ಜಾರಿ ಮಾಡಲಾದ 'ಪಂಚಾಯತ್' (ಗುರುತಿಸಲ್ಪಟ್ಟ ಪ್ರದೇಶಗಳಿಗೆ ವಿಸ್ತರಣಾ) ಕಾಯ್ದೆ 1996.

**(ಲೇಖಕರು ರಾಜ್ಯದ ಸಮಾಜವಾದಿ ಮತ್ತು ದಲಿತ ಚಳವಳಿಯಲ್ಲಿ ಭಾಗಿ ಆಗಿದ್ದವರು. ಪ್ರಸ್ತುತ, 'ಕರ್ನಾಟಕ ಸಮಾಜವಾದಿ ವೇದಿಕೆ' ಪ್ರಧಾನ ಸಮನ್ವಯಕಾರರು, ಸಂಪರ್ಕ: 94491–02294)**